# ನಮೂನೆ – 8ಎ

[13(4) ಮತ್ತು 26ನೇ ನಿಯಮಗಳನ್ನು ನೋಡಿ]

## ಮತದಾರರ ಪಟ್ಟಿಯಲ್ಲಿನ ನಮೂದು ವರ್ಗಾವಣೆಗೆ ಕೋರಿ ಸಲ್ಲಿಸುವ ಅರ್ಜಿ

ಇವರಿಗೆ,

ಮತದಾರರ ನೋಂದಣಾಧಿಕಾರಿ,

.................................................................... ವಿಧಾನಸಭಾ / ಲೋಕಸಭಾ£ ಕ್ಷೇತ್ರ

ಮಾನ್ಯರೇ,

ಕೆಳಗೆ ಹೆಸರಿಸಿರುವ *ನನಗೆ/ವ್ಯಕ್ತಿಗೆ* ಸಂಬಂಧಪಟ್ಟ ಮೇಲೆ ನಮೂದಿಸಿದ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿನ ನಮೂದನ್ನು ಈ ಚುನಾವಣಾ ಕ್ಷೇತ್ರದ ಪಟ್ಟಿಯ ಸುಸಂಗತ ಭಾಗಕ್ಕೆ ವರ್ಗಾಯಿಸಬೇಕೆಂದು ನಾನು ಕೋರುತ್ತೇನೆ. ವರ್ಗಾಯಿಸಬೇಕಾದ ನಮೂದಿನ ವಿವರಗಳನ್ನು ಕೆಳಗೆ ನೀಡಲಾಗಿದೆ.

ಮುಖದ ಮುಂಭಾಗ ಪೂರ್ಣ ಕಾಣುವ ಇತ್ತೀಚಿನ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಲು ಸ್ಥಳ (3.5ಸೆಂ.ಮೀ. X 3.5ಸೆಂ.ಮೀ.)

| | | | |
|---|---|---|---|
| **I. ಯಾವ ವ್ಯಕ್ತಿಗೆ ಸಂಬಂಧಿಸಿದ ನಮೂದನ್ನು ವರ್ಗಾಯಿಸಬೇಕಾಗಿದೆಯೋ ಆ ವ್ಯಕ್ತಿಯ ವಿವರಗಳು** | ಹೆಸರು: | | ಉಪನಾಮ (ಯಾವುದಾದರೂ ಇದ್ದರೆ): |
| | ಆತನ/ಆಕೆಯ ಹೆಸರು ಸೇರ್ಪಡೆಯಾಗಿರುವ ಮತದಾರರ ಪಟ್ಟಿಯ ಭಾಗದ ಸಂಖ್ಯೆ: | ಆ ಭಾಗದಲ್ಲಿ ಆತನ/ಆಕೆಯ ಕ್ರಮ ಸಂಖ್ಯೆ: | ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯ ಸಂಖ್ಯೆ (ನೀಡಲಾಗಿದ್ದರೆ): |
| * ತಂದೆಯ/ತಾಯಿಯ/ಗಂಡನ ಹೆಸರು: | ಹೆಸರು: | | ಉಪನಾಮ (ಯಾವುದಾದರೂ ಇದ್ದರೆ): |

**II. ಪ್ರಸಕ್ತ ಸಾಮಾನ್ಯ ನಿವಾಸ ಸ್ಥಳದ ವಿವರಗಳು (ಪೂರ್ಣ ವಿಳಾಸ)**

ಮನೆ / ಬಾಗಿಲ ಸಂಖ್ಯೆ:

ಬೀದಿ / ಪ್ರದೇಶ / ಸ್ಥಳ / ಮೊಹಲ್ಲಾ / ರಸ್ತೆ:

ಪಟ್ಟಣ / ಗ್ರಾಮ:

ಅಂಚೆ ಕಛೇರಿ: ಪಿನ್ ಕೋಡ್

ತಹಸಿಲ್ / ತಾಲ್ಲೂಕು / ಮಂಡಲ / ಠಾಣಾ:

ಜಿಲ್ಲೆ:

| | | |
|---|---|---|
| **III. ಅರ್ಜಿಯ ದಿನಾಂಕದಂದು ಮೇಲಿನ ವಿಳಾಸದಲ್ಲಿ ನಿರಂತರ ವಾಸದ ಅವಧಿ** | ವರ್ಷಗಳು | ತಿಂಗಳುಗಳು |

**IV. ನಮೂದನ್ನು ವರ್ಗಾಯಿಸಬೇಕಾಗಿರುವ ಭಾಗದ ಸಂಖ್ಯೆ (ಗೊತ್ತಿದ್ದರೆ)**

| | | | |
|---|---|---|---|
| **@V. ಅರ್ಜಿದಾರನ ವಿವರಗಳು** | ಹೆಸರು: | | ಉಪನಾಮ (ಯಾವುದಾದರೂ ಇದ್ದರೆ): |
| | ಆತನ/ಆಕೆಯ ಹೆಸರು ಸೇರ್ಪಡೆಯಾಗಿರುವ ಮತದಾರರ ಪಟ್ಟಿಯ ಭಾಗದ ಸಂಖ್ಯೆ: | ಆ ಭಾಗದಲ್ಲಿ ಆತನ/ಆಕೆಯ ಕ್ರಮ ಸಂಖ್ಯೆ: | ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ ಸಂಖ್ಯೆ (ನೀಡಲಾಗಿದ್ದರೆ): |

**ಸೂಚನೆ:** ಸುಳ್ಳು ಮತ್ತು ಸುಳ್ಳೆಂದು ಆತನಿಗೆ ತಿಳಿದಿರುವಂಥ ಅಥವಾ ಆತ ನಂಬಿರುವಂಥ ಅಥವಾ ನಿಜವೆಂದು ನಂಬಲು ಸಾಧ್ಯವಿಲ್ಲದಂಥ ಹೇಳಿಕೆ ನೀಡುವಂಥ ಅಥವಾ ಘೋಷಣೆ ಮಾಡುವಂಥ ಯಾರೇ ವ್ಯಕ್ತಿಯು, ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ (1950ರ 43) ಪ್ರಕರಣ 31ರ ಮೇರೆಗೆ ದಂಡನೆಗೆ ಗುರಿಯಾಗುತ್ತಾನೆ.

£ ವಿಧಾನ ಸಭೆ ಇಲ್ಲದಿರುವ ಕೇಂದ್ರಾಡಳಿತ ಪ್ರದೇಶಗಳು ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಷಯದಲ್ಲಿ.

* ಸಮುಚಿತವಲ್ಲದ ಪರ್ಯಾಯ ಪದವನ್ನು ಹೊಡೆದುಹಾಕಿ.

@ ಅರ್ಜಿದಾರನು ತನಗೆ ಸಂಬಂಧಪಟ್ಟ ನಮೂದಿನ ವರ್ಗಾವಣೆಗೆ ಕೋರಿದ್ದರೆ ಭಾಗ Vನ್ನು ಭರ್ತಿ ಮಾಡಬೇಕಾಗಿಲ್ಲ.

**VI. ಘೋಷಣೆ**

ಮೇಲೆ ತಿಳಿಸಿರುವ ಸಂಗತಿಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಾನು ನಂಬಿರುವ ಮಟ್ಟಿಗೆ ಸರಿಯಾಗಿವೆಯೆಂದು ನಾನು ಈ ಮೂಲಕ ಘೋಷಿಸುತ್ತೇನೆ.

ಸ್ಥಳ :

ದಿನಾಂಕ: ಅರ್ಜಿದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತು.

**ತೆಗೆದುಕೊಂಡ ಕ್ರಮದ ವಿವರಗಳು**

(ಚುನಾವಣಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿಯವರು ಭರ್ತಿ ಮಾಡಬೇಕು)

ಮತದಾರರ ಪಟ್ಟಿಯಲ್ಲಿ ತನಗೆ / ಶ್ರೀ / ಶ್ರೀಮತಿ / ಕುಮಾರಿ ........................................................................................ ಇವರಿಗೆ ಸಂಬಂಧಪಟ್ಟ ನಮೂದನ್ನು ವರ್ಗಾಯಿಸುವಂತೆ ಕೋರಿ ಶ್ರೀ / ಶ್ರೀಮತಿ / ಕುಮಾರಿ ........................................ .................................................................. .................................... ಇವರು 8ಎ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಅಂಗೀಕರಿಸಲಾಗಿದೆ */ ತಿರಸ್ಕರಿಸಲಾಗಿದೆ *.

ಅಂಗೀಕರಿಸಿದ್ದಕ್ಕೆ ಅಥವಾ ತಿರಸ್ಕರಿಸಿದ್ದಕ್ಕೆ [ನಿಯಮ 26(4)ನೇ ನಿಯಮದಡಿ] ವಿವರವಾದ ಕಾರಣಗಳು.

| | | |
|---|---|---|
| ಸ್ಥಳ: | ಮತದಾರರ | ಮತದಾರರ |
| ದಿನಾಂಕ: | ನೋಂದಣಾಧಿಕಾರಿಯವರ ಸಹಿ | ನೋಂದಣಾಧಿಕಾರಿಯವರ ಮೊಹರು |

* ಸಮುಚಿತವಲ್ಲದ ಪರ್ಯಾಯ ಪದವನ್ನು ಹೊಡೆದುಹಾಕಿ.

---

**ಕ್ಷೇತ್ರ ಮಟ್ಟದ ಅಧಿಕಾರಿಗಳ ಪರಾ (ಉದಾ: ಮತಗಟ್ಟೆ ಮಟ್ಟದ ಅಧಿಕಾರಿ, ನಿಯೋಜಿತ ಅಧಿಕಾರಿ, ಮೇಲ್ವಿಚಾರಣೆ ಅಧಿಕಾರಿ)**

## ಅರ್ಜಿಯ ಸ್ವೀಕೃತಿ

** ಶ್ರೀ / ಶ್ರೀಮತಿ / ಕುಮಾರಿ..............................................................................................

** ವಿಳಾಸ ..............................................................................................................

.............................................................................. ಇವರು **ನಮೂನೆ 8ಎ** ನಲ್ಲಿ ಸಲ್ಲಿಸಿರುವ ಅರ್ಜಿಯನ್ನು ಸ್ವೀಕರಿಸಲಾಗಿದೆ.

ದಿನಾಂಕ: ....................

ಮತದಾರರ ನೋಂದಣಾಧಿಕಾರಿಯವರ ಪರವಾಗಿ
ಅರ್ಜಿ ಸ್ವೀಕರಿಸುವ ಅಧಿಕಾರಿಯ ಸಹಿ
(ವಿಳಾಸ):..............................................................

** ಅರ್ಜಿದಾರರೇ ತುಂಬಬೇಕು.

---

## ಅರ್ಜಿ ನಮೂನೆ –8ಎ ಯನ್ನು ಭರ್ತಿ ಮಾಡಲು ಮಾರ್ಗದರ್ಶನ
## ಸಾಮಾನ್ಯ ಸೂಚನೆಗಳು

### ನಮೂನೆ –8ಎ ಯನ್ನು ಯಾರು ಸಲ್ಲಿಸಬಹುದು

ಚಾಲ್ತಿ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿರುವ ವ್ಯಕ್ತಿಯು, ಅದೇ ಕ್ಷೇತ್ರದ ಬೇರೆ ಸ್ಥಳಕ್ಕೆ ನಮೂದನೆಯನ್ನು ವರ್ಗಾಯಿಸಲು ಅರ್ಜಿಯನ್ನು ಸಲ್ಲಿಸಬಹುದು.

### ನಮೂನೆ–8ಎ ಯನ್ನು ಯಾವಾಗ ಸಲ್ಲಿಸಬಹುದು

1. ಅದೇ ಕ್ಷೇತ್ರದಲ್ಲಿ ತನಗೇ ಅಥವಾ ಬೇರಾರಿಗೋ ಸಂಬಂಧಿಸಿದ ನಮೂದನೆಯ ವರ್ಗಾವಣೆಗೆ ಅರ್ಜಿಯನ್ನು ಕ್ಷೇತ್ರದ ಮತದಾರರ ಕರಡು ಪಟ್ಟಿ ಪ್ರಕಟವಾದ ನಂತರ ಸಲ್ಲಿಸಬಹುದು. ಆ ಉದ್ದೇಶಕ್ಕಾಗಿ ನೀಡಲಾಗಿರುವ ನಿರ್ದಿಷ್ಟ ದಿನಗಳೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು. ಪರಿಷ್ಕರಣಾ ಕಾರ್ಯಕ್ರಮವನ್ನು ಪ್ರಕಟಿಸಿದಾಗ ಅವಧಿಯ ಬಗ್ಗೆ ವ್ಯಾಪಕ ಪ್ರಚಾರ ನೀಡಲಾಗುತ್ತದೆ.
2. ಅರ್ಜಿಯನ್ನು ಒಂದು ಪ್ರತಿಯಲ್ಲಿ ಸಲ್ಲಿಸಬೇಕು.
3. ಪರಿಷ್ಕರಣಾ ಕಾರ್ಯಕ್ರಮ ನಡೆಯದಿರುವಾಗ ಕೂಡ ವರ್ಷಪೂರ್ತಿ ಕ್ಷೇತ್ರದೊಳಗೆ ಹೆಸರಿನ ವರ್ಗಾವಣೆಗಾಗಿ ಅರ್ಜಿಯನ್ನು ಸಲ್ಲಿಸಬಹುದು. ಪರಿಷ್ಕರಣೆ ಕಾರ್ಯಕ್ರಮ ಇಲ್ಲದಿರುವ ಅವಧಿಯಲ್ಲಿ ಅರ್ಜಿಯನ್ನು ದ್ವಿ–ಪ್ರತಿಯಲ್ಲಿ ಸಲ್ಲಿಸಬೇಕು.

### ನಮೂನೆ–8ಎ ಯನ್ನು ಎಲ್ಲಿ ಸಲ್ಲಿಸಬೇಕು

1. ಮತದಾರರ ಪಟ್ಟಿ ಪರಿಷ್ಕರಣೆಯ ಅವಧಿಯಲ್ಲಿ, ಮತದಾರರ ಕರಡು ಪಟ್ಟಿ ಪ್ರಕಟಿಸಿರುವ ಸ್ಥಳದಲ್ಲಿ [ಸಾಮಾನ್ಯವಾಗಿ ಮತದಾನ ಕೇಂದ್ರದ ಸ್ಥಳಗಳಲ್ಲಿ] ಅಲ್ಲದೇ ಆಯಾ ಮತಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಿ ಅಧಿಕಾರಿಯವರಿಗೆ ಸಲ್ಲಿಸಬೇಕು.
2. ಮತದಾರರ ಪಟ್ಟಿ ಪರಿಷ್ಕರಣೆಯ ಕಾರ್ಯಕ್ರಮ ನಡೆಯದಿರುವ ಅವಧಿಯಲ್ಲಿ ಅರ್ಜಿಯನ್ನು ಮತದಾರರ ನೋಂದಣಿ ಅಧಿಕಾರಿಯವರಲ್ಲಿ ಮಾತ್ರ ಸಲ್ಲಿಸಬೇಕು.

### ನಮೂನೆ–8ಎ ಯನ್ನು ಭರ್ತಿ ಮಾಡುವುದು ಹೇಗೆ :

1. ಸುಸಂಗತ ನಮೂದಿನ ವರ್ಗಾವಣೆ ಅವಶ್ಯವಿರುವ ಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿಯವರ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ಖಾಲಿ ಸ್ಥಳದಲ್ಲಿ ಕ್ಷೇತ್ರದ ಹೆಸರನ್ನು ನಮೂದಿಸಬೇಕು.
2. ಅರ್ಜಿ ನಮೂನೆಯ ಭಾಗ–I ರಲ್ಲಿ ಈಗಾಗಲೇ ನೋಂದಾಯಿಸಿರುವ ಮತದಾರರ ಪಟ್ಟಿಯಲ್ಲಿನ ಹೆಸರು, ಭಾಗದ ಸಂಖ್ಯೆ, ಕ್ರಮ ಸಂಖ್ಯೆಯನ್ನು ಹಾಗೂ ಪೂರ್ಣವಾಗಿ ಮತದಾರರ ಭಾವಚಿತ್ರ ಗುರುತಿನ ಚೀಟಿ ಸಂಖ್ಯೆ (EPIC) ಮತ್ತು ಸಂಬಂಧಿಯ ಹೆಸರನ್ನು (ಮತದಾರರ ಪಟ್ಟಿಯಲ್ಲಿ ಮುದ್ರಿಸಿರುವಂತೆ) ಭರ್ತಿ ಮಾಡಬೇಕು.
3. ಅರ್ಜಿಯ ಭಾಗ–II ರಲ್ಲಿ ಕ್ಷೇತ್ರದ ಒಳಗೆ ನೀವು/ ಸಂಬಂಧಿಸಿದ ವ್ಯಕ್ತಿ ಸಾಮಾನ್ಯವಾಗಿ ವಾಸಿಸುವ ಸ್ಥಳವನ್ನು ಸ್ಥಳಾಂತರಿಸಿದ ಹೊಸ ಸ್ಥಳದ ಪೂರ್ಣ ವಿಳಾಸವನ್ನು ದಯವಿಟ್ಟು ನಮೂದಿಸಿ. ಅಪೂರ್ಣ ವಿಳಾಸವನ್ನು ಬರೆಯಬೇಡಿ. ಏಕೆಂದರೆ, ನಮೂದನೆಯನ್ನು ಎಲ್ಲಿಗೆ ವರ್ಗಾಯಿಸಬೇಕಾಗುತ್ತದೋ ಆ ಮತದಾರರ ಪಟ್ಟಿಯ ಸುಸಂಗತ ಭಾಗಕ್ಕೆ ಸೇರಿಸಲು ಸಾಧ್ಯವಾಗದಿರಬಹುದು.
4. ಅರ್ಜಿಯ ಭಾಗ–III ರಲ್ಲಿ ಭಾಗ–IIರಲ್ಲಿ ನಮೂದಿಸಿರುವ ಹೊಸ ವಿಳಾಸದಲ್ಲಿನ ನಿರಂತರ ವಾಸದ ಅಂದಾಜು ಅವಧಿಯನ್ನು ತಿಳಿಸಬೇಕು.
5. ಭಾಗ–IV ರಲ್ಲಿ ನೀವು ಸ್ಥಳಾಂತರಗೊಂಡಿರುವ ಹೊಸ ಪ್ರದೇಶದ ನಿವಾಸಿಗಳು ನೋಂದಾಯಿತಗೊಂಡಿರುವ ಮತದಾರರ ಪಟ್ಟಿ ಭಾಗದ ಸಂಖ್ಯೆಯನ್ನು ಬರೆಯಿರಿ. ಈ ಭಾಗವು ಐಚ್ಛಿಕ. ನಿಮಗೆ ಮತದಾರರ ಪಟ್ಟಿ ಭಾಗದ ಸಂಖ್ಯೆಯು ಗೊತ್ತಿಲ್ಲದ ಸಂದರ್ಭದಲ್ಲಿ ಅದನ್ನು ಖಾಲಿ ಬಿಡಬೇಕು.
6. ಅರ್ಜಿದಾರರು ತನಗೆ ಸ್ವಂತಕ್ಕೆ ಸಂಬಂಧಿಸಿದಂತೆ ಸ್ಥಳಾಂತರ ಕೋರಿರುವಾಗ, ಭಾಗ–Vನ್ನು ಭರ್ತಿ ಮಾಡಬೇಕಾಗಿಲ್ಲ. ಅರ್ಜಿದಾರರು ಬೇರೊಬ್ಬ ವ್ಯಕ್ತಿಯ ನಮೂದನೆಯ ಸ್ಥಳಾಂತರಕ್ಕಾಗಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಈ ಭಾಗವನ್ನು ಭರ್ತಿ ಮಾಡಬೇಕು.

---

ಕಾ.ಸೂ. ಪಿ. 37 ಸ.ಪ.ಪು.ಮು.ಮೈ. 40,000 ಪ್ರತಿಗಳು ದಿ : 19–06–2010